ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಹೊನ್ನಾಳಿ.

ಸಿ.ಸಿ.ನಂ. 89/2023

ಪಿರ್ಯಾದುದಾರರು : ನ್ಯಾಮತಿ ಪೋಲೀಸ್ ಠಾಣೆ

ವಿರುದ್ಧ

ಆರೋಪಿ : ಸುರೇಶ ಬಿನ್ ಮಾನಪ್ಪ, 40 ವರ್ಷ,
ವಾಸಃ ಹೊಸನಗರ ಟೌನ್,
ಹೊಸನಗರ, ಶಿವಮೊಗ್ಗ ತಾಲ್ಲೂಕು.

ಭಾ. ದಂ. ಪ್ರ. ಸಂ. ಕಲಂ. 313 ರನ್ವಯ ಆರೋಪಿಗಳ ಹೇಳಿಕೆ

ಪ್ರಶ್ನೆ.1: ಅಭಿಯೋಜನೆಯ ಪರ ವಿಚಾರಣೆ ಮಾಡಿದ ಸಾಕ್ಷಿದಾರರ ಹೇಳಿಕೆಗಳನ್ನು ಕೇಳಿ ತಿಳಿದುಕೊಂಡಿದ್ದೀರಾ?

ಉತ್ತರ :

ಪ್ರಶ್ನೆ.2: ಪ್ರಾಸಾ.1 ಹನುಮಂತಪ್ಪ ರವರು ತಮ್ಮ ಮುಖ್ಯ ವಿಚಾರಣೆಯ ಸಾಕ್ಷ್ಯದಲ್ಲಿ ದಿಃ 21-06-2022 ರಂದು ಹರಿಹರ ಹೋಗಲು ತಮ್ಮ ತಾಯಿಯು ನ್ಯಾಮತಿ ಬಸ್ ನಿಲ್ದಾಣದ ಮಹಂತೇಶ್ವರ ಸರ್ಕಲ್ ನಲ್ಲಿ ಬೆಳಗ್ಗೆ 11.30 ಗಂಟೆ ಸಮಯದಲ್ಲಿ ನಿಂತಿದ್ದಾಗ ಸುರಹೊನ್ನೆ ಕಡೆಯಿಂದ ಕೆಎ-20-6856 ನಂಬರ್ ನ ಗಜಾನನ ಬಸ್ ಅತಿವೇಗದಿಂದ ಬಂದು ತನ್ನ ತಾಯಿಗೆ ಡಿಕ್ಕಿಪಡಿಸಿರುತ್ತದೆ. ಸದರಿ ವಿಚಾರವು ತನಗೆ ಪೋನ್ ಮೂಲಕ ಗೊತ್ತಾಗಿದ್ದರಿಂದ ತಾನು ನ್ಯಾಮತಿ ಸರ್ಕಾರಿ ಆಸ್ಪತ್ರೆಗೆ ಹೋಗಿ ನೋಡಿದಾಗ ತಮ್ಮ ತಾಯಿಯ ಕಾಲುಗಳಿಗೆ ತೀವ್ರಗಾಯಗಳಾಗಿದ್ದವು. ಹೆಚ್ಚಿನ ಚಿಕಿತ್ಸೆಗೆ ತನ್ನ ತಾಯಿಯನ್ನು ಮಣಿಪಾಲ್ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇನೆ. ಅಪಘಾತದ ವಿಚಾರವಾಗಿ ಪೊಲೀಸ್ ಠಾಣೆಯಲ್ಲಿ ದೂರು ನೀಡಿರುತ್ತೇನೆ.

ಮುಂದುವರೆದು ಸಾಕ್ಷಿಯು ನಂತರ ಪೊಲೀಸರು ಅಪಘಾತ ಸ್ಥಳದಲ್ಲಿ ಸಂಜೆ 5.30 ರಿಂದ 6.00 ಗಂಟೆ ಸಮಯದಲ್ಲಿ ಮಹಜರ್ ಮಾಡಿ, ತಮ್ಮಿಂದ ಸಹಿಗಳನ್ನು ಪಡೆದುಕೊಂಡು ಪೋಟೋಗಳನ್ನು ತೆಗೆದಿರುತ್ತಾರೆ. ನಂತರ ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು, ಅಲ್ಲಿಂದ ಹೆಚ್ಚಿನ ಚಿಕಿತ್ಸೆಗೆ ಶ್ರೀನಿವಾಸಮುಕ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆ. 3 ತಿಂಗಳು ತನ್ನ ತಾಯಿಯನ್ನು ಸದರಿ ಆಸ್ಪತ್ರೆಯಲ್ಲಿ ದಾಖಲಿಸಿದ್ದು, ಆಸ್ಪತ್ರೆಯಿಂದ ಮನೆಗೆ ಕರೆದುಕೊಂಡು ಬಂದ 3 ದಿನಕ್ಕೆ ತನ್ನ ತಾಯಿ ಮೃತ ಪಟ್ಟಿರುತ್ತಾರೆ. ಸದರಿ ಅಪಘಾತವು ಬಸ್ ಚಾಲಕನ ತಪ್ಪಿನಿಂದ ಆಗಿರುವ ಬಗ್ಗೆ ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನಿವೇನು ಹೇಳಲು ಇಚ್ಚಿಸುತ್ತೀರಿ?

ಉತ್ತರ :

ಪ್ರಶ್ನೆ.3: ಪ್ರಾಸಾ.5 ಚಂದ್ರು ಎಂ. ಜೆ ರವರು ತಮ್ಮ ಮುಖ್ಯ ವಿಚಾರಣೆಯ ಸಾಕ್ಷ್ಯದಲ್ಲಿ ದಿಃ 21.06.2022 ರಂದು ತಾನು ಠಾಣಾ ಪ್ರಭಾರ ಕರ್ತವ್ಯದಲ್ಲಿದ್ದಾಗ, ಮಧ್ಯಾಹ್ನ 3 ಗಂಟೆಗೆ ಚಾಸಾ 1 ರವರು ಠಾಣೆಗೆ ಹಾಜರಾಗಿ ಲಿಖಿತ ದೂರನ್ನು ನೀಡಿದ್ದು, ಸದರಿ ದೂರನ್ನು ಸ್ವೀಕರಿಸಿ, ಠಾಣಾ ಗುನ್ನೆ ನಂ.93/2022 ರಂತೆ ಪ್ರಕರಣವನ್ನು ದಾಖಲಿಸಿ, ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಮತ್ತು ಪ್ರತಿಯನ್ನು ಮೇಲಾಧಿಕಾರಿಗಳಿಗೆ ನಿವೇದಿಸಿಕೊಂಡಿರುತ್ತೇನೆ. ಅದೇ ದಿನ ಚಾಸಾ 1 ರವರು ಸ್ಥಳ ತೋರಿಸಿದ ಮೇರೆಗೆ ಚಾಸಾ 5 ಮತ್ತು 6 ರವರ ಸಮಕ್ಷಮ ಸ್ಥಳ ಪಂಚನಾಮೆ ಜರುಗಿಸಿ, ಕಚ್ಚಾ ನಕಾಶೆ ತಯಾರಿಸಿ, ಫೋಟೋಗಳನ್ನು ತೆಗೆಸಿರುತ್ತೇನೆ. ಅದೇ ದಿನ ಸದರಿ ಪಂಚರ ಸಮಕ್ಷಮ ನ್ಯಾಮತಿ ಪೋಲೀಸ್ ಠಾಣಾ ಆವರಣದಲ್ಲಿ ಅಪಘಾತಪಡಿಸಿದ ವಾಹನವನ್ನು ಕೆಎ 20 ಎಎ 6856 ನಂಬರ್ ನ ಅಶೋಕ್ ಲೈಲ್ಯಾಂಡ್ ಬಸ್ ನ್ನು ಅಮಾನತ್ತು ಪಂಚನಾಮೆ ಜರುಗಿಸುವ ಮೂಲಕ ವಶಪಡಿಸಿಕೊಂಡು ಫೋಟೋಗಳನ್ನು ತೆಗೆಸಿರುತ್ತೇನೆ. ಚಾಸಾ 2 ರಿಂದ 3 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ದಿಃ 22.06.2022 ರಂದು ಅಪಘಾತಪಡಿಸಿದ ವಾಹನದ ಐಎಂವಿ ವರದಿ ನೀಡುವಂತೆ ಚಾಸಾ 12 ರವರಿಗೆ ಮನವಿ ಮಾಡಿಕೊಂಡಿರುತ್ತೇನೆ.

ಮುಂದುವರೆದು ಸಾಕ್ಷಿಯು ಅಪಘಾತಪಡಿಸಿದ ವಾಹನದ ಜಿಪಿಎ ಹೋಲ್ಡರ್ ಚಾಸಾ 11 ರವರಿಗೆ ನೋಟೀಸ್ ಜಾರಿ ಮಾಡಿ ಅವರಿಂದ ಸಮಜಾಯಿಷಿಕೆ ಮತ್ತು ಇಂಡಿಮಿನಿಟಿ ಬಾಂಡ್ ನ್ನು ಬಿಡುಗಡೆ ಮಾಡಿರುತ್ತೇನೆ. ಆರೋಪಿಯ ವಿರುದ್ಧ ದಸ್ತಗಿರಿ ಕ್ರಮ ಜರುಗಿಸಿ ಠಾಣಾ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ. ದಿಃ 10.10.2022 ರಂದು ಚಾಸಾ 1 ರವರು ಠಾಣೆಗೆ ಬಂದು ನೀಡಿದ ಮುಂದುವರೆದ ದೂರನ್ನು ಪಡೆದುಕೊಂಡು 304(ಎ) ಐಪಿಸಿ ಕಲಂ ನ್ನು ಪ್ರಕರಣದಲ್ಲಿ ಅಳವಡಿಸಿಕೊಳ್ಳಲು ನ್ಯಾಯಾಲಯಕ್ಕೆ ಮನವಿ ಮಾಡಿಕೊಂಡಿರುತ್ತೇನೆ. ಅದೇ ದಿನ ಮೃತ ಚನ್ನಮ್ಮಾಳ ಮುಸ್ಸೇನಾಳು ಗ್ರಾಮಕ್ಕೆ ಭೇಟಿ ನೀಡಿ ಶವ ತನಿಖೆ ಜರುಗಿಸಿ, ಚಾಸಾ 8 ಮತ್ತು 9 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ಚಾಸಾ 13 ರವನ್ನು ಶವ ಕಾವಲಿಗೆ ನೇಮಿಸಿರುತ್ತೇನೆ. ಮೃತರ ಪಿಎಂ ವರದಿಯನ್ನು ನೀಡುವಂತೆ ಚಾಸಾ 10 ರವರಿಗೆ ಮನವಿ ಮಾಡಿಕೊಂಡಿರುತ್ತೇನೆ. ಚಾಸಾ 13 ರವರಿಂದ 65 ಬಿ ಪ್ರಮಾಣ ಪತ್ರವನ್ನು ಪಡೆದುಕೊಂಡಿರುತ್ತೇನೆ. ಮುಂದಿನ ತನಿಖೆಗಾಗಿ ಕಡತವನ್ನು ಚಾಸಾ 15 ರವರಿಗೆ ಹಸ್ತಾಂತರಿಸಿರುವ ಬಗ್ಗೆ ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನೀವೇನು ಹೇಳಲು ಇಚ್ಚಿಸುತ್ತೀರಿ?

ಉತ್ತರ :

ಪ್ರಶ್ನೆ.4: ಪ್ರಾಸಾ.7 ಸಿದ್ದೇಗೌಡ. ಹೆಚ್ ರವರು ತಮ್ಮ ಮುಖ್ಯ ವಿಚಾರಣೆಯ ಸಾಕ್ಷ್ಯದಲ್ಲಿ ದಿಃ 11.10.2022 ರಂದು ಚಾಸಾ 14 ರವರಿಂದ ಈ ಕೇಸಿನ ಕಡತವನ್ನು ಪಡೆದುಕೊಂಡು ಪರಿಶೀಲಿಸಿ ಅದೇ ದಿನ ಚಾಸಾ 1 ಮತ್ತು 2 ರವರ ಮುಂದುವರೆದ ಹೇಳಿಕೆಗಳನ್ನು ಮತ್ತು ಚಾಸಾ 13 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ದಿಃ 12.01.2023 ರಂದು ಚಾಸಾ 12 ರವರಿಂದ ಐಎಂವಿ ವರದಿಯನ್ನು ಪಡೆದುಕೊಂಡ ಮೃತರ ಪಿಎಂ ವರದಿಯನ್ನು ಚಾಸಾ 10 ರವರಿಂದ

ಪಡೆದುಕೊಂಡಿರುತ್ತೇನೆ. ತನಿಖೆ ಪೂರ್ಣಗೊಳಿಸಿ ಆರೋಪಿಯ ವಿರುದ್ಧ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುವ ಬಗ್ಗೆ ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನಿವೇನು ಹೇಳಲು ಇಚ್ಛಿಸುತ್ತೀರಿ?

ಉತ್ತರ :

ಪ್ರಶ್ನೆ.5: ನೀವು ಹೇಳುವುದು ಏನಾದರೂ ಇದೆಯೇ ?

ಉತ್ತರ : ಆ ).

ಪ್ರಶ್ನೆ.6: ನಿಮ್ಮ ಪರ ಯಾರಾದರೂ ಸಾಕ್ಷಿದಾರರನ್ನು ವಿಚಾರಣೆ ಮಾಡಿಕೊಳ್ಳುವಿರಾ ?

ಉತ್ತರ : ಆ ).

(ಸಾಕ್ಷಿ ವಿಚಾರಣೆಯಲ್ಲಿ ಕಂಡು ಬಂದ ಅಂಶಗಳ ಸಂಕ್ಷಿಪ್ತ ವಿವರಗಳನ್ನು ಆರೋಪಿಗೆ ತಿಳಿದ ಕನ್ನಡ ಭಾಷೆಯಲ್ಲಿ ಓದಿ ಹೇಳಿ ಅವರು ಹೇಳಿದಂತೆ ಉತ್ತರಗಳನ್ನು ಬರೆದುಕೊಳ್ಳಲಾಯಿತು ಎಂದು ದೃಢೀಕರಿಸುತ್ತೇನೆ).

ಸ್ಥಳ : ಹೊನ್ನಾಳಿ

ದಿನಾಂಕ: 14.07.2026

ಹೆಚ್ಚುವರಿ ಸಿವಿಲ್ ಮತ್ತು ಜೆ.ಎಂ.ಎಫ್.ಸಿ
ನ್ಯಾಯಾಧೀಶರು, ಹೊನ್ನಾಳಿ.